ಕರ್ನಾಟಕ ಸರ್ಕಾರ

ದೊಡ್ಡಹುಲ್ಲೂರು ಗ್ರಾಮ ಪಂಚಾಯತಿ ಕಾರ್ಯಾಲಯ

ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸಂಖ್ಯೆ:ದೊ.ಗ್ರಾ.ಪಂ:150/2024-25 ದಿನಾಂಕ:07-01-2025

ರವರಿಗೆ

ಸದಸ್ಯ ಕಾರ್ಯದರ್ಶಿ
ಯೋಜನಾ ಪ್ರಾಧಿಕಾರ
ಹೊಸಕೋಟೆ.

ಮಾನ್ಯರೆ,

ವಿಷಯ: ಅಪಾರ್ಟ್‌ಮೆಂಟ್‌ಗೆ ನೀರನ್ನು ಸರಬರಾಜು ಮಾಡುವ ಬಗ್ಗೆ ನಿರಾಪೇಕ್ಷಣಾ ಪತ್ರವನ್ನು ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹೊಸಕೋಟೆ ತಾಲ್ಲೂಕು ಕಸಬಾ ಹೋಬಳಿ ಯಳಚನಾಯಕನಪುರ ಗ್ರಾಮಕ್ಕೆ ಸೇರಿದ ಸರ್ವೇ ನಂ.14/2ರ 2 ಎಕರೆ 26 ಗುಂಟೆ ಮತ್ತು ದೊಡ್ಡಹುಲ್ಲೂರು ಗ್ರಾಮದ ಸ.ನಂ.75/4ರ 17.08 ಗುಂಟೆ, ಸ.ನಂ.75/6ರ 2 ಎಕರೆ 15.08 ಗುಂಟೆ, ಸ.ನಂ.75/7ರ 17.08 ಗುಂಟೆ, ಸ.ನಂ.75/9ರ 0.21ಗುಂಟೆ ರ ಜಮೀನು ಶ್ರೀ ಸೌಪರ್ಣಿಕ ಗ್ರೀನ್ ಮೆಡೋಸ್ ಪ್ರೈ.ಲಿ(Sowparnika Green Meadows Private Limited) ಪರವಾಗಿ ಮೀನಾಕ್ಷಿ ರಾಮ್‌ಜಿ ಕೋಂ ರಾಮ್‌ಜಿ ಸುಬ್ರಮಣ್ಯಂ ರವರ ಹೆಸರಿನಲ್ಲಿ ಅಪಾರ್ಟ್‌ಮೆಂಟ್ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಿದ್ದು, ಈ ಜಮೀನಿನಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿ ಅಭಿವೃದ್ಧಿಪಡಿಸಿದ ನಂತರ ಪಂಚಾಯಿತಿಯಲ್ಲಿ ಖಾತೆ ನೋಂದಣಿ ಮಾಡಿಸಿ ಪಂಚಾಯಿತಿಗೆ ಕಟ್ಟಬೇಕಾದ ತೆರಿಗೆಗಳನ್ನು (ಕಟ್ಟಡ/ನಿವೇಶನ, ನೀರು ಮತ್ತು ಬೀದಿ ದೀಪಗಳ ತೆರಿಗೆ) ಕಟ್ಟಿದ ನಂತರ ವಸತಿ ಬಡಾವಣೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಗ್ರಾಮ ಪಂಚಾಯಿತಿಯಿಂದ ಒದಗಿಸಿಕೊಡಲು ಯಾವುದೇ ಅಭ್ಯಂತರವಿರುವುದಿಲ್ಲವೆಂದು ತಿಳಿಸಿದೆ. ಈ ವಿಚಾರವನ್ನು ತಮ್ಮ ಅವಗಾಹನೆಗೆ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ವಂದನೆಗಳೊಂದಿಗೆ

ತಮ್ಮ ನಂಬುಗೆಯ,

ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ
ದೊಡ್ಡಹುಲ್ಲೂರು ಗ್ರಾಮ ಪಂಚಾಯ್ತಿ
ಹೊಸಕೋಟೆ ತಾಲ್ಲೂಕು